

# ಹೊಸ ತಲೆಮಾರಿಗೆ ಆರ್ಥಿಕ ಅರಿವು



■ ಗಿರೀಶ್ ಸಿ.ಜಿ.

ಭಾರತದ ಜೆನ್ ಜಿ (Gen Z) ಪೀಳಿಗೆಗೆ ಆರ್ಥಿಕ ಜಾಗೃತಿ, ಅಪಾಯ ಮತ್ತು ಆರ್ಥಿಕ ನಿರ್ಧಾರಗಳ ಕೈಗೊಳ್ಳುವ ದೃಷ್ಟಿಯಲ್ಲಿ ತಿಳಿವಳಿಕೆಯ ಅಗತ್ಯ ಹೆಚ್ಚಿದೆ.

ಈ ಪೀಳಿಗೆ (1997ರಿಂದ 2012ರ ನಡುವೆ ಜನನ) ಆರ್ಥಿಕ ವ್ಯವಸ್ಥೆಗೆ ಅಭೂತಪೂರ್ವ ಪ್ರವೇಶವನ್ನು ಹೊಂದಿರುವ ಡಿಜಿಟಲ್ ಯುಗಕ್ಕೆ ಸೇರಿದೆ. ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (UPI) ಮತ್ತು ಆನ್‌ಲೈನ್ ಬ್ಯಾಂಕಿಂಗ್‌ನಿಂದ ಹಿಡಿದು ಆ್ಯಪ್–ಆಧಾರಿತ ಹೂಡಿಕೆ ಮತ್ತು ತ್ವರಿತ ಸಾಲ ಸೌಲಭ್ಯದ ಬಗ್ಗೆ ಉದ್ಯೋಗಕ್ಕೆ ಸೇರುವ ಮೊದಲೇ ತಿಳಿಯಬೇಕು.

ಡಿಜಿಟಲ್ ಕ್ರಾಂತಿ ಆರ್ಥಿಕ ಒಳಗೊಳ್ಳುವಿಕೆಯನ್ನು ಸುಧಾರಿಸಿದೆ. ಜೆನ್ ಜಿ ಪೀಳಿಗೆಯನ್ನು ಸೂಕ್ತ ತಯಾರಿ ಇಲ್ಲದೆ ಸಂಕೀರ್ಣ ಆರ್ಥಿಕ ಅಪಾಯಗಳಿಗೆ ಒಡ್ಡುವ ಸಾಧ್ಯತೆ ಹೆಚ್ಚಿದೆ. ಶಾಲಾ–ಕಾಲೇಜಿನಲ್ಲಿ ಸಿದ್ಧಾಂತ (Theory) ಸಾಂಪ್ರದಾಯಿಕ ಶಿಕ್ಷಣ ಪ್ರಸ್ತುತ ತಂತ್ರಜ್ಞಾನ ಕಾಲಕ್ಕೆ ಸಾಕಾಗುವುದಿಲ್ಲ. ಪ್ರಾಯೋಗಿಕವಾಗಿ ಹಣಕಾಸಿನ ನಿರ್ಧಾರವನ್ನು ಹೇಗೆ ತೆಗೆದುಕೊಳ್ಳುತ್ತಾರೆ ಎಂಬುದರ ಮೇಲೆ ಕೇಂದ್ರೀಕರಿಸುವ ನಡವಳಿಕೆ ಆಧಾರಿತ (Behaviour – Oriented) ಶಿಕ್ಷಣದ ಕಡೆಗೆ ಬದಲಾಗುವ ಅವಶ್ಯಕತೆ ಇದೆ.

ಜೆನ್ ಜಿ ಪೀಳಿಗೆಯು ಶಾಲಾ ಮತ್ತು ಕಾಲೇಜು ದಿನಗಳಲ್ಲೇ ಯುಪಿಐ ಮತ್ತು ಮೊಬೈಲ್ ವ್ಯಾಲೆಟ್, ಆನ್‌ಲೈನ್ ಟ್ರೇಡಿಂಗ್ ಪ್ಲಾಟ್‌ಫಾರ್ಮ್‌ಗಳನ್ನು ಬಳಸುತ್ತದೆ. ‘ಬೈ ನೌ ಪೇ ಲೇಟರ್’ (ಖರೀದಿಸಿ, ನಂತರ ಪಾವತಿಸಿ) ಉತ್ಪನ್ನಗಳು, ಫ್ರೀಲ್ಯಾನ್ಸಿಂಗ್, ಕಂಟೆಂಟ್ ಕ್ರಿಯೇಷನ್ ಮತ್ತು ಪ್ಲಾಟ್‌ಫಾರ್ಮ್ ಆಧಾರಿತ ಕೆಲಸದಿಂದ ಬರುವ ಗಿಗ್ (Gig) ಆದಾಯ, ಆರ್ಥಿಕ ಸೌಲಭ್ಯ ಅವರ ತಿಳಿವಳಿಕೆಗಿಂತ ವೇಗವಾಗಿ ಬೆಳೆದಿದೆ. ಅದು ಅಪಾಯಗಳಿಗೂ ಕಾರಣವಾಗುತ್ತಿದೆ.

ಕಲಿಕೆಯಲ್ಲಿ ಹಲವು ಮಿತಿಗಳಿವೆ. ಈ ಶಿಕ್ಷಣವು ವ್ಯಾಖ್ಯಾನ ಮತ್ತು ಪರಿಕಲ್ಪನೆ, ಅಕೌಂಟಿಂಗ್ ಮತ್ತು ಆರ್ಥಿಕ ಸಿದ್ಧಾಂತ, ನಿಷ್ಕ್ರಿಯ ಕಲಿಕೆಯನ್ನು ಮಾಡಿಸುತ್ತದೆ. ಸಿದ್ಧಾಂತ ಕಲಿಕೆಯಲ್ಲಿ ಖರ್ಚು ಮಾಡುವ ಪ್ರಚೋದನೆ, ಭಾವನಾತ್ಮಕ ಹೂಡಿಕೆ, ಸಾಲದ ವರ್ತನೆ, ಅಪಾಯವನ್ನು ಎದುರಿಸುವ ಸಾಮರ್ಥ್ಯವನ್ನು ಸಮರ್ಪಕವಾಗಿ ಪರಿಹರಿಸುವುದಿಲ್ಲ.

ಆರ್ಥಿಕ ಸಾಕ್ಷರತೆಗೆ ಹಣಕಾಸಿನ ಹವ್ಯಾಸಗಳು, ಅನಿಶ್ಚಿತತೆಯ ಅಡಿಯಲ್ಲಿ ನಿರ್ಧಾರ ತೆಗೆದುಕೊಳ್ಳುವಿಕೆ, ದೀರ್ಘಕಾಲೀನ ಚಿಂತನೆ. ನೈತಿಕ ಮತ್ತು ನಿಯಮಬದ್ಧ ನಡವಳಿಕೆಗಳಿಗೆ ಒತ್ತು ನೀಡುತ್ತದೆ. ಜೆನ್ ಜಿ ಪೀಳಿಗೆಗೆ ಅಗತ್ಯವಿರುವ ಆರ್ಥಿಕ ಶಿಕ್ಷಣದ ಪ್ರಮುಖ ಕ್ಷೇತ್ರಗಳು ಆದಾಯ ಮತ್ತು ವೆಚ್ಚಗಳ ಜಾಡು ಹಿಡಿಯುವುದು ಅನಿಯಮಿತ ಹಣದ ಹರಿವಿನ ನಿರ್ವಹಣೆ, ತುರ್ತು ನಿಧಿಗಳ ಸ್ಥಾಪನೆ, ಜೀವನಶೈಲಿ ಹಣದುಬ್ಬರವನ್ನು ತಪ್ಪಿಸುವ ಬಗ್ಗೆ ತಿಳಿದುಕೊಳ್ಳಬೇಕು.

ಉದಾಹರಣೆಗೆ; ತಿಂಗಳಿಗೆ 50 ರಿಂದ 80 ಸಾವಿರ ಗಳಿಸುವ 22 ವರ್ಷದ ಒಬ್ಬ ಸ್ವತಂತ್ರ ಉದ್ಯೋಗಿಗೆ ಆದಾಯ ಅನಿಯಮಿತವಾಗಿರುತ್ತದೆ. ಆತ ಆತುರದ ಖರ್ಚಿನಿಂದ ಉಳಿಸಲು ವಿಫಲನಾದರೆ ಅತ್ಯಂತ ಅಪಾಯವನ್ನು ಎದುರಿಸಬೇಕಾಗುತ್ತದೆ. ಅದೇ ಆ ವ್ಯಕ್ತಿ ಪ್ರತಿ ತಿಂಗಳು ಬಜೆಟ್ ಅಳವಡಿಸಿಕೊಂಡು, ಮೂರು ತಿಂಗಳ ತುರ್ತು ನಿಧಿಯನ್ನು ಸ್ಥಾಪಿಸಿಕೊಂಡರೆ ಅವರ ಆರ್ಥಿಕ ಸ್ಥಿರತೆ ಗಮನಾರ್ಹವಾಗಿ ಸುಧಾರಿಸುತ್ತದೆ.

ಡಿಜಿಟಲ್ ಪಾವತಿ, ಖರ್ಚಿನ ಶಿಸ್ತನ್ನು ಮತ್ತು ಕಾಂಟ್ಯಾಕ್ಟ್‌ಲೆಸ್ ಪಾವತಿಗಳು ಖರ್ಚು ಮಾಡುವಾಗ ಆಗುವ ಮಾನಸಿಕ ಭಾರವನ್ನು ಕಡಿಮೆ ಮಾಡುತ್ತವೆ. ಇದರಿಂದ ಮಿತಿಮೀರಿದ ಖರ್ಚು, ಖರ್ಚಿನ ಅಂದಾಜು ಸಿಗದೆ, ನಿಯಂತ್ರಣ ಸಾಧಿಸಲಾಗುವುದಿಲ್ಲ. ಆದ್ದರಿಂದ ಶೈಕ್ಷಣಿಕ ಅರಿವು ಅಗತ್ಯವಿದೆ. ಇದು ಮಾಸಿಕ ವೆಚ್ಚದ ಲೆಕ್ಕಪರಿಶೋಧನೆ (Audit), ಪ್ರಜ್ಞಾಪೂರ್ವಕ ಖರ್ಚಿನ ಹವ್ಯಾಸ, ಡಿಜಿಟಲ್ ವಹಿವಾಟಿನ ಶಿಸ್ತನ್ನು ಪ್ರೋತ್ಸಾಹಿಸುತ್ತದೆ. ಹೂಡಿಕೆ, ಷೇರು ಮಾರುಕಟ್ಟೆ, ಮ್ಯೂಚುಯಲ್ ಫಂಡ್, ಡಿಜಿಟಲ್ ಸ್ವತ್ತುಗಳು, ಡೆರಿವೇಟಿವ್ಸ್ ಜೆನ್ ಜಿಗಳಲ್ಲಿ ಹೆಚ್ಚು ಆಸಕ್ತಿ ತೋರಿಸುತ್ತದೆ.

ಉದಾಹರಣೆಗೆ; ಒಬ್ಬ ವಿದ್ಯಾರ್ಥಿ ಸಾಮಾಜಿಕ ಮಾಧ್ಯಮದ ಸಲಹೆಗಳಿಂದ ಪ್ರಭಾವಿತನಾಗಿ ಇಂಟ್ರಾಡೇ ಟ್ರೇಡಿಂಗ್ ಪ್ರಾರಂಭಿಸುತ್ತಾನೆ. ಪದೇ ಪದೇ ನಷ್ಟ ಅನುಭವಿಸುತ್ತಾನೆ. ಕೊನೆಗೆ ಮಾರುಕಟ್ಟೆಯಿಂದ ಸಂಪೂರ್ಣವಾಗಿ ಹೊರಬರುತ್ತಾನೆ. ನಂತರ, ರಚನಾತ್ಮಕ ಶಿಕ್ಷಣದ ಮೂಲಕ, ಮ್ಯೂಚುಯಲ್ ಫಂಡ್‌ಗಳಲ್ಲಿ ಮತ್ತು ದೀರ್ಘಕಾಲೀನ ಈಕ್ವಿಟಿಯಲ್ಲಿ ವ್ಯವಸ್ಥಿತ ಹೂಡಿಕೆಗೆ ಬದಲಾಗುತ್ತಾನೆ.

## ಜೆನ್ ಜಿ ಪೀಳಿಗೆಯ ದುಡುಕು

ಅತಿಯಾದ ಆತ್ಮವಿಶ್ವಾಸದ ಪೂರ್ವಗ್ರಹ, ಆ್ಯಪ್ ಬಳಕೆಯ ಕೌಶಲ್ಯ ತಾವೇ ಪರಿಣಿತರು ಎಂಬ ಹುಸಿ ಭ್ರಮೆಯನ್ನು ಸೃಷ್ಟಿಸುತ್ತದೆ. ಟ್ರೆಂಡ್‌ಗಳು ಮತ್ತು ಇನ್‌ಫ್ಲುಯೆನ್ಸರ್‌ಗಳಿಂದ ಪ್ರೇರಿತ ನಿರ್ಧಾರ, ತಕ್ಷಣದ ಸಂತೋಷ, ದೀರ್ಘಕಾಲೀನ ಸ್ಥಿರತೆಗಿಂತ ಅಲ್ಪಾವಧಿಯ ಲಾಭಗಳಿಗೆ ಆದ್ಯತೆ ನೀಡುವುದು. ಹೋಲಿಕೆ ಮಾಡಿಕೊಳ್ಳುವುದರಿಂದ ಉಂಟಾಗುವ ಒತ್ತಡ ಮತ್ತು ಅವಾಸ್ತವಿಕ ನಿರೀಕ್ಷೆಗಳನ್ನು ಹುಟ್ಟಿಸಿಕೊಳ್ಳುವುದು.

ಜವಾಬ್ದಾರಿಯುತ ಆರ್ಥಿಕ ಶಿಕ್ಷಣ: ಕಾನೂನು ಅನುಸರಣೆಗೆ ಒತ್ತು ನೀಡುತ್ತದೆ. ಮೋಸದ ಯೋಜನೆಗಳನ್ನು ತಪ್ಪಿಸುವುದು.

ರಚನಾತ್ಮಕ ಆರ್ಥಿಕ ಶಿಕ್ಷಣ: ಪದವಿ ಹಂತದಲ್ಲಿ ಪ್ರಾಯೋಗಿಕ ಆರ್ಥಿಕ ಶಿಕ್ಷಣವನ್ನು ಪರಿಚಯಿಸುವುದು. ಕೇಸ್ ಸ್ಟಡೀಸ್ ಬಳಸುವುದು.

ವೃತ್ತಿಪರರಿಂದ ಮಾರ್ಗದರ್ಶನ ಪಡೆದು ಪ್ರೋತ್ಸಾಹಿಸುವುದು. ದೀರ್ಘಕಾಲೀನ ಆರ್ಥಿಕ ಯೋಗಕ್ಷೇಮ ಉತ್ತೇಜಿಸುವುದು. ಆಧುನಿಕ ವಾಸ್ತವಗಳನ್ನು ಪ್ರತಿಬಿಂಬಿಸುವಂತೆ ವಿಕಸನಗೊಳ್ಳಬೇಕು. ಇದು ಭಾರತದ ಆರ್ಥಿಕ ಭವಿಷ್ಯಕ್ಕೆ ಧನಾತ್ಮಕ ಕೊಡುಗೆ ನೀಡುತ್ತದೆ. ■